**■ ದೇವರ ರಕ್ಷಾ ಕವಚದಿಂದ ಯಾವುದೇ ದುಷ್ಪರಿಣಾಮ ಆಗದಿರುವುದೇ ಸಂತಸ**

# ಪ್ರಾಮಾಣಿಕತೆಯಿದ್ದಲ್ಲಿ ಪ್ರಗತಿ ಸಾಧ್ಯ: ಸ್ವರ್ಣವಲ್ಲೀ ಶ್ರೀ

**ಯಲ್ಲಾಪುರ:** ನಾವಿರುವ ಪ್ರದೇಶ ನಮಗೆ ಸ್ವರ್ಗ. ಅನಾಹುತಗಳಿಂದ ದೇವರ ರಕ್ಷಣೆ ದೊರೆತಿದೆ. ನಮಗಿರುವ ದೇವರ ರಕ್ಷಾ ಕವಚದಿಂದ ಯಾವುದೇ ದುಷ್ಪರಿಣಾಮ ಆಗುತ್ತಿಲ್ಲ ಎನ್ನುವುದು ಸಂತಸದ ಸಂಗತಿ. ಸಹಕಾರಿ ಸಂಘಗಳು ಸ್ಥಾನಿಕವಾಗಿ ಉದ್ದಿಮೆಗಳನ್ನು ಪ್ರಾರಂಭಿಸಲು ಉತ್ತೇಜನ ನೀಡಿ ಉದ್ಯೋಗ ಮತ್ತು ಪ್ರತಿಭಾ ಫಲಾಯನ ತಡೆಯುವ ಪ್ರಯತ್ನ ಮಾಡಬೇಕು ಎಂದು ಸೋಂದಾ ಸ್ವರ್ಣವಲ್ಲೀ ಮಠಾಧೀಶ ಗಂಗಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ನುಡಿದರು.

ಅವರು ಗುರುವಾರ ಸಂಜೆ ಉಮಚಗಿ ವ್ಯವಸಾಯ ಸೇವ ಸಹಕಾರಿ ಸಂಘದ ಶತಮಾನೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪ್ರಾಮಾಣಿಕತೆಯ ಕೊರತೆಯಿರುವಲ್ಲಿ ಸಾಧನೆ ಮತ್ತು ಮುನ್ನಡೆಯಲ್ಲಿ ಹಿಂದೆ ಬೀಳುತ್ತೇವೆ. ಆದರೆ ಈ ಪ್ರದೇಶದಲ್ಲಿನ ಜನರಲ್ಲಿನ ಪ್ರಾಮಾಣಿಕತೆಯಿಂದ ಸಹಕಾರಿ ಕ್ಷೇತ್ರ ಸೇರಿದಂತೆ ಹಲವು ರಂಗ ಉಳಿದುಕೊಂಡಿದೆ. ಸಮಾಜವನ್ನು ಸಂಸ್ಕಾರದ ಜೊತೆಗೆ ಉಳಿಸುವ ಕೆಲಸವಾಗಬೇಕು. ಸಹಕಾರಿ ಸಂಘಗಳು ಸಮಾಜದ ಆಗುಹೋಗುಗಳ ಬಗ್ಗೆ ಗಮನ ನೀಡುವುದರೊಂದಿಗೆ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕಿದೆ. ನಮ್ಮ ಬೆಳೆಗಳನ್ನು ದೇವರಂತೆ ಕಾಣುತ್ತಿದ್ದೇವೆ. ಜೊತೆಗೆ ಮನೆಯೊಳಗೆ ಇರುವ ದೇವರನ್ನು ಮರೆಯದೇ ಪೂಜಿಸುವ ಕಾರ್ಯವೂ ನಡೆಯಬೇಕು ಎಂದ ಶ್ರೀಗಳು ಕೃಷಿ ಜಮೀನು ಯಾರ್‍ಯಾರಿಗೋ ಪರಭಾರೆಯಾಗುತ್ತಿರುವುದನ್ನು ತಡೆಯುವುದರ ಮೂಲಕ ಮುಂದಾಗುವ ಅನಾಹುತಗಳನ್ನು ತಡೆಯಬೇಕು. ನಮ್ಮೊಳಗೆ ಒಳ್ಳೆಯ ಯೋಜನೆ ಯೋಚನೆ ಇಟ್ಟುಕೊಂಡು ಮುನ್ನಡೆಯಬೇಕು. ಸಂಸ್ಥೆ ಬೆಳೆಯುತ್ತ ಸಮಾಜವನ್ನು ಬೆಳೆಸುವತ್ತ ಗಮನಹರಿಸಲಿ ಎಂದರು.



**ಯಲ್ಲಾಪುರ: ಉಮ್ಮಚಗಿ ಸಹಕಾರಿ ಸಂಘದ ಶತಮಾನೋತ್ಸವವನ್ನು ಶ್ರೀಗಳು ಉದ್ಘಾಟಿಸಿದರು.**

ಶ್ರೀಗಳು ಸಂಘದಲ್ಲಿ ಸೇವೆ ಸಲ್ಲಿಸಿದ ಅಧ್ಯಕ್ಷರುಗಳ ಭಾವಚಿತ್ರವನ್ನು ಅನಾವರಣಗೊಳಿಸಿದರು. ಕ್ಯಾಮ್ಕೋ ನಿರ್ದೇಶಕ ಶಂಭುಲಿಂಗ ಹೆಗಡೆ ಮಾತನಾಡಿ, ಸಹಕಾರಿ ತತ್ವವನ್ನು ಈ ಭಾಗದಲ್ಲೂ ಚೆನ್ನಾಗಿ ಅಳವಡಿಸಿಕೊಳ್ಳುವ ಮೂಲಕ ಸಹಕಾರಿ ಸಂಘವನ್ನು ಗಟ್ಟಿಗೊಳಿಸಿದ್ದಾರೆ. ಇದರಿಂದ ರೈತ ಪರಂಪರೆಗೂ ಅನುಕೂಲಕರವಾಗಿದೆ. ರೈತರ ಸವಾಲುಗಳನ್ನು ಎದುರಿಸಲು ಸಹಕಾರಿ ಸಂಘಗಳು ಮುಂದಾಗಬೇಕಿದೆ ಎಂದರು.

ಶ್ರೀಮಾತಾ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಜಿ.ಎನ್. ಹೆಗಡೆ ಹಿರೇಸರ ಮಾತನಾಡಿ, ಸಂಸ್ಥೆಯ ಏಳಿಗೆಯಲ್ಲಿ ಸದಸ್ಯರ ಪಾಲುದಾರಿಕೆಯೂ ಇದೆ. ಗ್ರಾಹಕರ ಮತ್ತು ಸಂಸ್ಥೆಯ ನಡುವಿನ ಸಮನ್ವಯತೆಯಿದ್ದಲ್ಲಿ ಯಾವುದೇ ಸಂಘ ಉತ್ತಮವಾಗಿ ಬೆಳೆಯಬಲ್ಲುದು ಎಂದರು. ಸಂಘದ ಉಪಾಧ್ಯಕ್ಷ ಎಂ.ಪಿ. ಹೆಗಡೆ ಚವತ್ತಿ, ನಿರ್ದೇಶಕರು ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಮಾಜಿ ಅಧ್ಯಕ್ಷರನ್ನು, ಕಾರ್ಯದರ್ಶಿಗಳನ್ನು ಹಾಗೂ ಹಾಲಿ ಅಧ್ಯಕ್ಷ ಎಂ.ಜಿ. ಭಟ್ಟ ಸಂಕದಗುಂಡಿ, ಶಂಬುಲಿಂಗ ಹೆಗಡೆ, ಜಿ.ಎನ್. ಹೆಗಡೆ ಹೀರೆಸರ ಕಟ್ಟಡದ ಗುತ್ತಿಗೆದಾರ ಶ್ಯಾಮ್ ಭಟ್ಟ ಹಾಗೂ ವಿನ್ಯಾಸಕಾರ ವಸಂತ ಭಟ್ಟ, ಟಿ.ಎಸ್. ಭಟ್ಟ ಅವರನ್ನು ಸನ್ಮಾನಿಸಲಾಯಿತು. ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎಂ.ಜಿ. ಭಟ್ಟ ಸಂಕದಗುಂಡಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ವಿಘ್ನೇಶ್ವರ ಭಟ್ಟ ಕೋಟೆಮನೆ ಮತ್ತು ಸವಿತಾ ಹೆಗಡೆ ಕಾರ್ಯಕ್ರಮ ನಿರ್ವಹಿಸಿದರು. ಮುಖ್ಯ ಕಾರ್ಯನಿರ್ವಾಹಕ ಆರ್.ಎಸ್. ಹೆಗಡೆ ಕನೇನಹಳ್ಳಿ ವಂದಿಸಿದರು.